ಏದುಸಿರು ಬಿಡಲು ಪ್ರಾರಂಭಿಸಿದಳು. ಮುಖವೆಲ್ಲ ಬಣ್ಣಗೆಟ್ಟು ಒಂದು ಥರ ಆಯಿತು. ಹೂಗುಚ್ಛದಲ್ಲಿನ ಎಂಥದೋ ಒಂದು ಹೂ ಅವಳಿಗೆ ಅಲರ್ಜಿಕ್ ರಿಯಾಕ್ಷನ್ ತಂದಿತ್ತು ಎನ್ನುವುದರಲ್ಲಿ ಸಂಶಯವಿರಲಿಲ್ಲ. ಇದಕ್ಕೆಲ್ಲ ಕಾರಣನಾದ ನಾನವಳನ್ನು ಹಿಡಿದು ಬೆನ್ನು ತಡವಿ ಸಾಂತ್ವನಗೊಳಿಸಬೇಕೋ ಬೇಡವೋ? ಆದರೆ, ಆ ಯೋಚನೆಯೇ ನನಗೆ ಬರಲಿಲ್ಲ. ಅಲ್ಲದೆ ಯಾವ ಕಾರಣಕ್ಕೂ ಹುಡುಗಿಯರನ್ನು ಹಿಡಿದುಕೊಳ್ಳುವುದು ನಮ್ಮ ಕಡೆ ನಿಷಿದ್ಧವಾಗಿತ್ತು. ನಾನು ಮೂಕ ಪ್ರೇಕ್ಷಕನಂತೆ ನಿಂತಿದ್ದೆ. ಈ ಸೀನಿನ ಗಲಾಟೆ ಸುರುವಾಗಿ ಒಂದೆರಡು ನಿಮಿಷಗಳೂ ಕಳೆದಿರಲಿಲ್ಲ; ಅದು ಹೇಗೋ ಇಡೀ ಕಾಲೇಜಿಗೇ ವಿಷಯ ಗೊತ್ತಾಗಿಬಿಟ್ಟಿತ್ತು; ಕಾಲೇಜಿನ ಎಲ್ಲಾ ಮೂರು ಫ್ಲೋರುಗಳಿಂದಲೂ ಹುಡುಗ ಹುಡುಗಿಯರು, ಆಯಗಳು ಮತ್ತು ಅಧ್ಯಾಪಕರು ಕೆಳಗಿಣುಕಿ ನಮ್ಮ ಕಡೆ ನೋಡತೊಡಗಿದರು. ವಾಚ್‌ಮನ್ ತನ್ನ ಸ್ಪೆಷಲ್ ಬಿಗಿಲನ್ನು ಊದಿದ.

ನನ್ನ ವಾಕ್‌ವೇ ತನ್ನದೇ ವೇಗದಲ್ಲಿ ನನ್ನನ್ನು ಮುಂದಕ್ಕೆ ಒಯ್ಯುತ್ತಿತ್ತು. ಅದೇಕೋ ಊರು ಸೇರುವ ತವಕ ನನ್ನನ್ನು ಆವರಿಸಿತು. ಆದರೆ, ನಾನು ಮುಂದೆ ಧಾವಿಸಿದರೆ ಮುಗ್ಗರಿಸಿ ಬೀಳಬಹುದು; ಕೆಳಗಿಳಿದರೆ ಕಾಲು ಮುರಿಯಬಹುದು. ವಾಕ್‌ವೇಗೆ ನನ್ನನ್ನು ನಾನು ಬಿಟ್ಟುಕೊಡದೆ ಬೇರೆ ದಾರಿಯಿರಲಿಲ್ಲ. ಪಕ್ಕದ ಮೇನ್‌ಸ್ಟ್ರೀಮಿನಲ್ಲಿ ನನ್ನಂತೆ ಊರಿಗೆ ಮರಳುವವರು ಯಾರೂ ಇರಲಿಲ್ಲ. ಮೇನ್‌ಸ್ಟ್ರೀಮಿನಲ್ಲಿ ಪಾಸಾದವರು ಹಿಂದಕ್ಕೆ ಮರಳುವ ಪ್ರಶ್ನೆಯೇ ಇರಲಿಲ್ಲ. ಅವರು ನೇರವಾಗಿ ರಾಜಧಾನಿಗೆ ಕಳಿಸಲ್ಪಟ್ಟು ರಾಜಧಾನಿಯ ಕವಿಗಳೋ ಕತೆಗಾರರೋ ನಾಟಕಗಾರರೋ ಆಗುತ್ತಾರೆ. ರಾಜಧಾನಿ ಅಂಥಾ ಪ್ರತಿಭಾವಂತರಿಂದ ತುಂಬಿದೆ. ನಾನು ಮಾರ್ಜಿನಲ್ ವ್ಯಕ್ತಿಯಾಗಿದ್ದು ಆರಿಸಲ್ಪಡುವುದರಲ್ಲಿ ವಿಫಲನಾಗಿದ್ದೇನೆ. ನಾನು ಮಾಡಿದ ತಪ್ಪುಗಳು ಎರಡು: ಪ್ರತಿಭೆಯಿಲ್ಲದೆ ಕೇವಲ ಶ್ರಮದಿಂದ ಆರಿಸಲ್ಪಡುವೆನೆಂದು ನಂಬಿದ್ದು ಒಂದು; ಆತುರ ಪಟ್ಟದ್ದು ಇನ್ನೊಂದು. ಇವೆರಡನ್ನೂ ತ್ಯಜಿಸಿ ನನ್ನಷ್ಟಕ್ಕೇ ಇರಲು ನನಗೆ ಸಲಹೆ ಸಿಕ್ಕಿದೆ. ಆದ್ದರಿಂದ ಊರು ಸೇರಲು ಹಾತೊರೆಯುತ್ತಿದ್ದೇನೆ. ಊರಲ್ಲಿ ಏಂಜೆಲ್ ನನಗೆ

